ಇದೇ ಧೋರಣೆ ಮುಂದುವರಿದಾಗ ದುಃಖ–ವಿಷಾದದ ಮಾತಿರಲಿ, ಹೊಣೆಗಾರಿಕೆ ಮತ್ತು ಸವಾಲು ಇನ್ನೂ ದೊಡ್ಡದಾಗಿ ಕಾಣಿಸತೊಡಗುತ್ತದೆ.


ಇತ್ತೀಚೆಗೆ ಪ್ರಕಟವಾಗಿರುವ ಹೆಚ್.ಆರ್. ಲೀಲಾವತಿ ಅವರ ಆತ್ಮಕಥನ ಓದಿದಾಗ ಈ ಎಲ್ಲ ವಿಚಾರಗಳೂ ಕಣ್ಣೆದುರಿಗೆ ಹಾದುಹೋದವು. ಲೀಲಾವತಿಯವರ ಪ್ರತಿಭೆ, ಸಾಧನೆ ಮುಂತಾದ ಸ್ಥಾಪಿತ ನೆಲೆಗಟ್ಟುಗಳಲ್ಲಿ ಈ ಆತ್ಮಕಥನವನ್ನು ಓದುವಾದ ಸ್ಥಾಪಿತ ಓದಿನ ಮಾದರಿಯ ಮುಂದುವರಿಕೆಯಾಗುತ್ತದೆ.

ಲೀಲಾವತಿಯವರ ಈ ಆತ್ಮಕಥನ, 'ನಾನುಂಟು ನನ್ನ ರೆಕ್ಕೆಗಳುಂಟು' ಎನ್ನುವ ಭಾವಬಂಧುರದಲ್ಲಿ ಹಾರಲೆತ್ನಿಸುವ ಸಾಹಸವನ್ನು ಚಿತ್ರಿಸುತ್ತದೆ. ತಾನೇ ಹೇರಿಕೊಂಡ, ಲೋಕ ಹೇರಿದ ಹಗ್ಗ ಕಟ್ಟಿದ ಕಲ್ಲನ್ನು ಪ್ರಯತ್ನಪೂರ್ವಕವಾಗಿ ಬಿಸಾಡಿ ತನ್ನ ಹಕ್ಕನ್ನು ತಾನು ಸಂಪಾದಿಸಿಕೊಳ್ಳುವ ಒಂದು ಯತ್ನದಂತೆ ಈ ಪಠ್ಯ ಕಾಣಿಸುತ್ತದೆ.

ಇನ್ನೊಂದು ದಿಕ್ಕಿನಿಂದ ಈ ಕೃತಿಯ ಕೇಂದ್ರವನ್ನು ಅರ್ಥ ಮಾಡಿಕೊಳ್ಳುವುದಾದರೆ, ಎಲ್ಲ ದಮನದ ಕೊನೆಯಲ್ಲಿ ಒಂದು ಆಸ್ಫೋಟ ಆಗಲೇಬೇಕಲ್ಲ, ಆ ಆಸ್ಫೋಟದಂತೆಯೂ ಇವರ ಕೃತಿ ಕಾಣಿಸುತ್ತದೆ. ಬದುಕನ್ನು ಬಂಧಿಸುವ ಎಲ್ಲಕ್ಕೂ ಕುರಿಯಂತೆ ತಲೆ ಕೊಟ್ಟು ಬದುಕಿದ ಹೆಣ್ಣು ಆತ್ಮಸಾಕ್ಷಾತ್ಕಾರವಾದಂತೆ ತನ್ನದೇ ಕರಾರುಗಳ ಮೇಲೆ ತನ್ನ ಉಳಿದ ಬದುಕನ್ನು ನಡೆಸುವ ಯೂಟರ್ನ್‌ನಂತೆಯೂ ಕಾಣಿಸುತ್ತದೆ.

ಸಂಗೀತ ಎನ್ನುವುದೇ ಬದುಕನ್ನು ತಾಳಲಯಗಳ ಶಾಸ್ತ್ರದಲ್ಲಿಯೂ ರಾಗಾಲಾಪನೆಯ ಕಲ್ಪನೆಯ ಕಲಾವಿಲಾಸದಲ್ಲಿ ನೇಯುವುದೂ ಆದ ಅಪೂರ್ವ ಸಂಗತಿ. ಎರಡರಲ್ಲಿ ಯಾವುದು ತಪ್ಪಿದರೂ ಅಪಶ್ರುತಿ. ಆದರೆ ಹೆಣ್ಣಿನ ಮಟ್ಟಿಗೆ ಅಪಶ್ರುತಿ ಎಲ್ಲಿಂದ ಆರಂಭವಾಗುತ್ತಿದೆ, ಅದನ್ನು ಸರಿಪಡಿಸುವುದು ಹೇಗೆ ಎನ್ನುವುದೇ ಒಂದು ಸಂಕೀರ್ಣವಾದ ಸಂಗತಿ. ಮೊದಲು ಅದರ ಮೂಲವನ್ನು ಕಂಡುಕೊಳ್ಳಬೇಕು, ಅದಕ್ಕೊಂದು ತಯಾರಿಯೂ ಬೇಕು. ಆ ತಯಾರಿಯಲ್ಲಿ ಈ ತನಕ ತಾನು ನಂಬಿದ್ದರ ವಿರುದ್ಧವೇ ಈಸಬೇಕಾದ ಅಪ್ರಿಯವಾದ ಸಂಗತಿಯೂ ಇರುತ್ತದೆ, ಲೋಕವನ್ನು ಎದುರುಹಾಕಿಕೊಳ್ಳಬೇಕಾದದ್ದೂ ಇರುತ್ತದೆ.

ಲೀಲಾವತಿಯವರು ಇದನ್ನು ನಿಧಾನವಾಗಿ




**ಹಾಡಾಗಿ ಹರಿದಾಳೆ**
ಲೇ: ಎಚ್.ಆರ್. ಲೀಲಾವತಿ
ಪು: 324; ಬೆ: ₹ 400
ಪ್ರ: ವಿಕಾಸ ಪ್ರಕಾಶನ, ಬೆಂಗಳೂರು.
ಫೋನ್: 9900095204

ಅರ್ಥಮಾಡಿಕೊಳ್ಳುತ್ತಾ ತನ್ನ ಪ್ರತಿಭೆಯನ್ನೇ ಅಸ್ತಿವಾರವಾಗಿಟ್ಟುಕೊಂಡು, ಮನೆಯವರ ಬೆಂಬಲವನ್ನೂ ಕೂಡಿಸಿಕೊಂಡು ತನ್ನದೇ ಗೂಡನ್ನು ಕಟ್ಟಿಕೊಂಡ ಕಥನ ಇದು. ಗೂಡು ಎಂದೆ, ಇದನ್ನು ಭವನವೆಂದೇ ಕರೆಯಬಹುದೋ ಏನೋ. ಆದರೆ ಗೂಡು ಎನ್ನುವುದರಲ್ಲಿ ಸ್ವಂತಿಕೆಯ ಅರ್ಥ ಹೆಚ್ಚಾಗಿರುವುದರಿಂದ ಅದನ್ನು ಬಳಸುತ್ತಿದ್ದೇನೆ.

ಪ್ರತಿಭೆಯ ಗಣಿಯೇ ಆಗಿದ್ದಾಗಲೂ, ಶಕ್ತವಾದ ಜಾತಿಯ ಹಿನ್ನೆಲೆ ಇದ್ದಾಗಲೂ ಲೀಲಾವತಿ ಎದುರಿಸಿದ ಅನೇಕ ಸವಾಲುಗಳು ಅವರು 'ಹೆಣ್ಣು' ಎನ್ನುವ ಕಾರಣಕ್ಕಾಗಿಯೇ ಸೃಷ್ಟಿಯಾದವು. ಸಂಗೀತ ಲೀಲಾವತಿಯವರ ಆದಿಕ್ಷೇತ್ರ. ಅದು ಅವರ ವೃತ್ತಿ, ಪ್ರವೃತ್ತಿ, ಆಸಕ್ತಿ ಮುಂತಾದ ಪರಿಕಲ್ಪನೆಗಳಿಗೆ